

May 2013

# ಕಾನನ

ನಿಸರ್ಗದೆಡೆಗೆ ಪಯಣ

BANNERUGHATTA

**WILDLIFE CONSERVATION GROUP**

# ಕಾನನ

MAY 2013

ನಿಸರ್ಗದೆಡೆಗೆ ಪಯಣ

* ನಮ್ಮ ದುಃಖಕ್ಕೆಲ್ಲ ಮೂಲ
* ಹಮ್ ಹೋಂಗೇ ಕಾಮಿಯಾಬ್ ಏಕ್ ದಿನ್
* ಬುಗರಿಕಲ್ ಭಾಗ-2
* ಹಕ್ಕಿಲೋಕ
* ವಿವಿ ಅಂಕಣ
* ಬರ (ಕವನ)



ಸಂಪಾದಕರು : ಅಶ್ವಥ ಕೆ.ಎನ್ ವಿನ್ಯಾಸ : ನಾಗೇಶ್ ಓ.ಎಸ್
ಲೇಖಕ ವೃಂದ : ಸ್ವಾಮಿ ಸೌಖ್ಯಾನಂದಜೀ ಮಹಾರಾಜ್, ಅನಿತ ನರೇಶ್ ಮಂಚಿ, ನಾಗೇಶ್.ಓ.ಎಸ್, ಅಶ್ವಥ.ಕೆ.ಎನ್, ಶಂಕರಪ್ಪ.ಕೆ.ಪಿ, ಕೃಷ್ಣ ನಾಯಕ್,
ಕರಡು ತಿದ್ದುಪಡಿ : ಮುರಳಿ.ಎಸ್
ಮುಖಪುಟ : Tamil Yeoman Butterfly

kaanana.mag@gmail.com

# ಸಂಪಾದಕೀಯ

World Migratory Bird Day

ಭಾರತದ  ದಕ್ಷಿಣ ಪ್ರಸ್ಥಭೂಮಿಯು ಮಾನ್ಸೂನ್ ಎಲೆ ಉದುರುವ ಕಾಡುಗಳು ನಿತ್ಯ ಹರಿದ್ವರ್ಣ ಕಾಡುಗಳಂತೆ ದಟ್ಟವಾಗಿ ಬೆಳೆಯುವುದಿಲ್ಲ, ಬದಲಾಗಿ ಇಲ್ಲಿನ ಮರಗಳ ನಡುವೆ ಬಿದಿರು, ಮುಳ್ಳಿನ ಮರಗಳು, ಪೊದೆಗಳು ಮತ್ತು ಒರಟು ಜಾತಿಯ ಹುಲ್ಲು ಬಳ್ಳಿಗಳು ಬೆಳೆದಿರುತ್ತವೆ ಈ .ಎಲೆ ಉದುರುವ ಕಾಡಿನಲ್ಲಿ  ಮರಗಳು ಸುಂದರವಾದ ಅಗಲವಾದ ಎಲೆಗಳನ್ನು ಬಿಡುತ್ತವೆ. ಮತ್ತೆ ಬೇಸಿಗೆ ಕಾಲದಲ್ಲಿ  ಬಿಸಿಲನ್ನು ಎದುರಿಸಲಾಗದೆ ಮರಗಳು ತಮ್ಮ ಎಲೆಗಳನ್ನು ಉದುರಿಸಿ ಬೋಳಾಗಿ ಆಸ್ತಿಪಂಜರದಂತೆ ನಿಲ್ಲುತ್ತವೆ. ಇಂತಹ ಕಾಡುಗಳಲ್ಲಿ ಕೆಲವು ಅಪರೂಪದ ಎಂದೂ ಕಾಣದ ಹಕ್ಕಿಗಳು ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವುದನ್ನು ಪಕ್ಷಿ ವೀಕ್ಷಕರು ಕಂಡಿದ್ದಾರೆ.


ವ್ಯಾಗ್ಟೈಲ್, ಗೋಲ್ಡನ್ ಓರಿಯೋಲ್, ಹೆಬ್ಬಾತುಗಳಂತಹ ಇತರ ಜಲಪಕ್ಷಿಗಳು ವಲಸೆ ಬರುತ್ತವೆ, ಪ್ರತಿ ವರ್ಷ ಹಕ್ಕಿಗಳು ಸುಮಾರು ಮೂವತ್ತೈದು ಸಾವಿರ ಕಿಲೋ ಮೀಟರುಗಳಷ್ಟು ದೂರದ ಉತ್ತರ ಧ್ರುವದಿಂದ ದಕ್ಷಿಣ ಧ್ರುವಕ್ಕೆ ವಲಸೆ ಬರುತ್ತವೆ. ಇನ್ನೂ ಹೆಬ್ಬಾತುಗಳಂತಹ ಹಕ್ಕಿಗಳು ಹಿಮಾಲಯದಂತಹ ಮೂವತ್ತು ಸಾವಿರ ಅಡಿ ಎತ್ತರದ ಪರ್ವತಗಳನ್ನು ದಾಟಿ ಭಾರತಕ್ಕೆ ವಲಸೆ ಬರುತ್ತವೆ.

ಈ ವಲಸೆ ಹಕ್ಕಿಗಳಿಗೆ ಹೊಂದುವ ಹವಾಮಾನ, ಆಹಾರ, ಆವಾಸಗಳು ಇಲ್ಲಿ ಇರುವುದರಿಂದ ಸಾವಿರಾರು ಕಿಲೋ ಮೀಟರ್ ದೂರದ ಪ್ರದೇಶಗಳಿಂದ ದಕ್ಷಿಣ ಪ್ರಸ್ಥಭೂಮಿಗೆ ವಲಸೆ ಬರುತ್ತವೆ. ಈ ವಲಸೆ ಹಕ್ಕಿಗಳ ಆವಾಸಗಳಾದ ಜೌಗುಪ್ರದೇಶ, ಕೆರೆಗಳು, ಕರಾವಳಿ ಪ್ರದೇಶಗಳು, ಜಲಪಾತಗಳು, ಗೋಮಾಳ, ಕೃಷಿಭೂಮಿಯಂತಹ  ಪೋಷಣಾ ನೆಲೆಗಳು ಹಾಳಾಗದಂತೆ  ಸಂರಕ್ಷಿಸುವುದು ನಮ್ಮೆಲ್ಲರ ಹೊಣೆ!.

ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ  ಬರೆಯಬಹುದು.



Wildlife Conservation Group



# ಆಧ್ಯಾತ್ಮದಲ್ಲಿ ವನ್ಯಜೀವಿಗಳು

## ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿಪಕ್ಷಿಗಳು

### * ನಮ್ಮ ದುಃಖಕ್ಕೆಲ್ಲ ಮೂಲ



ನಾವು ಈ ಪ್ರಪಂಚದಲ್ಲಿ ನಾನಾರೀತಿಯ ತೊಂದರೆಗಳಿಗೆ ಕಷ್ಟಕ್ಕೆ ಗುರಿಯಾದಾಗ, ನಾವು ಮೊದಲು ಬೆರಳು ಮಾಡುವುದು ಇತರರ ಕಡೆ, ಅವರೇ ನಮ್ಮ ದುಃಖಕ್ಕೆ ಕಾರಣ ಎಂದು ಬಗೆಯುತ್ತೇವೆ. ನಮ್ಮೊಳಗಿನ ಆಸೆ ಆಕಾಂಕ್ಷೆಗಳೇ, ಅದಕ್ಕೆಲ್ಲ ಕಾರಣ ಎಂದು ನಾವು ಯಾವಾಗಲೂ ಬಾವಿಸುವುದಿಲ್ಲ, ನಮ್ಮಲ್ಲಿರುವ ದುಃಖಗಳಿಗೆ ನಾವೇ ಕಾರಣ ಎಂದು ಶ್ರೀರಾಮಕೃಷ್ಣರು ಈ ದೃಷ್ಟಾಂತದಿಂದ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ.

ಒಂದು ಊರಿನಲ್ಲಿ ಒಬ್ಬ ಬೆಸ್ತ ಮೀನು ಹಿಡಿಯುತ್ತಿದ್ದ. ಒಂದು ಹದ್ದು ಹಾರಿಬಂದು ಒಂದು ಮೀನನ್ನು ಕಚ್ಚಿಕೊಂಡು ಹಾರಿಹೋಯಿತು. ಮೀನನ್ನು ಕಂಡೊಡನೆ ನೂರಾರು ಕಾಗೆಗಳು ಹದ್ದಿನ ಬಾಯಲ್ಲಿದ್ದ ಮೀನನ್ನು ಹಿಡಿಯಲು, ನಾ ಮುಂದು ತಾ ಮುಂದು ಎಂದು ಹದ್ದಿನ ಮೇಲೆ ಎಗರಿದವು, ಹದ್ದು ಎಲ್ಲಿ ಹಾರಿದರೂ ಸಹ ಅಲ್ಲೆಲ್ಲಾ ಕಾಗೆಗಳೂ ಸಹ ಹಿಂಬಾಲಿಸಿದವು, ಹದ್ದು ಪೂರ್ವ-ಪಶ್ಚಿಮ- ಉತ್ತರ-ದಕ್ಷಿಣ ಯಾವ ದಿಕ್ಕಿಗೆ ಹಾರಿದರೂ ಸಹ ಕಾಗೆಗಳು ಬಿಡಲಿಲ್ಲ. ಗಾಬರಿಯಿಂದ ಹದ್ದು ಹಾರಾಡುತ್ತಿದ್ದಾಗ ಮೀನು ಹದ್ದಿನ ಬಾಯಿಯಿಂದ ಜಾರಿಬಿತ್ತು. ಆಗ ಕಾಗೆಗಳು ಹದ್ದನ್ನು ಬಿಟ್ಟು ಮೀನಿನ ತುಂಡಿನತ್ತ ಹಾರಿದವು.

ಈ ಗೊಂದಲದಿಂದ ಪಾರಾದ ನಂತರ ಹದ್ದು ಒಂದು ಮರದ ಕೊಂಬೆಯ ಮೇಲೆ ಕುಳಿತು ಯೋಚಿಸಿತು ಆ. . ಹ. . ಹ. . ಇದಕ್ಕೆಲ್ಲ ಕಾರಣ ಮೀನಿನ ತುಂಡು. ನಾನು ಎಲ್ಲಿಯವರೆಗೆ ಮೀನಿನ ತುಂಡಿನ ಜೊತೆಗೆ ಇದ್ದೆನೊ ಅಲ್ಲಿಯವರೆಗೆ ಈ ಕಾಗೆಗಳು ನನ್ನ ಬೆನ್ನಟ್ಟಿ ಹಾರಿ ಬಂದವು ಈಗ ಅದು ಇಲ್ಲ.

ಈ ಕಾಗೆಗಳ ಉಪದ್ರವ ಇಲ್ಲ, ಅದೇ ರೀತಿ ಎಲ್ಲಿಯವರೆಗೆ ಮನುಷ್ಯ ಆಸೆಗಳೆಂಬ ಮೀನಿನ ತುಂಡು ಹಿಡಿದಿರುತ್ತಾನೆಯೋ ಅಲ್ಲಿಯವರೆಗೆ ಕಷ್ಟ-ದುಃಖಗಳೆಂಬ ಕಾಗೆಗಳ ಹಿಂಡು ನಮ್ಮ ಹಿಂದೆ ಸದಾ ಇರುತ್ತದೆ. ಅದಕ್ಕೆ ಕೊನೆಯಿಲ್ಲ, ಆಸೆಯೆಂಬ ಮೀನಿನ ತುಂಡು ಬಿಟ್ಟರೆ ಕಷ್ಟಗಳೆಲ್ಲ ಕಾಲಿಗೆ ಬುದ್ಧಿ ಹೇಳುತ್ತವೆ.

**ನೀತಿ**: ''ಆಸೆಯೇ ದುಃಖಕ್ಕೆ ಕಾರಣ''.

- ಸ್ವಾಮಿ ಸೌಖ್ಯಾನಂದಜೀ ಮಹಾರಾಜ್

# ಹಮ್ ಹೋಂಗೇ ಕಾಮಿಯಾಬ್ ಏಕ್ ದಿನ್. . .



ಪ್ರಕೃತಿ ಎನ್ನುವುದು ಒಂದು ಕ್ಷಣ ಸುಂದರವಾಗಿ ಎಲ್ಲವೂ ಸೊಬಗೇ ಎಂದೆನಿಸುವಂತೆ ಮಾಡಿದರೆ ಮತ್ತೆ ಸ್ವಲ್ಪ ಹೊತ್ತಿನಲ್ಲೇ ಹೆದರಿಕೆಯನ್ನೂ ಹುಟ್ಟಿಸುವಂತಿರುತ್ತದೆ. ಸೂಕ್ಷ್ಮವಾಗಿ ನೋಡುವ ಕಣ್ಣುಗಳಿಗೆ ಅಲ್ಲಿ ನಿತ್ಯವೂ ಬೇರೆ ಬೇರೆ ವಿಷಯಗಳ ಪಾಠ ನಡೆಯುತ್ತಿರುತ್ತದೆ. ಇದು ನೀವು ಕ್ಲಾಸ್ ರೂಮಿನಲ್ಲಿ ಕುಳಿತು ಗಲ್ಲಕ್ಕೆ ಕೈಯಿಟ್ಟು ಬೇಕೋ ಬೇಡವೋ ಎಂದು ಬೆಲ್ ಆಗುವ ಸದ್ದಿಗಾಗಿ ಕಾಯುತ್ತಾ ಪಾಠ ಕೇಳುವಂತೆ ಇರುವುದಿಲ್ಲ. ನೀವಾಗಿಯೇ ನಿಮ್ಮ ಗುರುವನ್ನು ಹುಡುಕಬೇಕು. ನೀವಾಗಿಯೇ ವಿಷಯಗಳನ್ನು ಅರಿತುಕೊಳ್ಳಬೇಕು. ನಿಮ್ಮ ತಿಳಿವಿಗೆ ನಿಲುಕಿದಷ್ಟನ್ನು ತುಂಬಿಕೊಳ್ಳಬೇಕು. ಇಷ್ಟೆಲ್ಲಾ ಪುರಾಣ ಯಾಕಾಗಿ ಎಂದಿರಾ. . ಹೇಳ್ತೀನಿ ಕೇಳಿ. . .




ಮೊನ್ನೆ ತೋಟದ ದಾರಿಯಲ್ಲಿ ಏನನ್ನೋ ಯೋಚಿಸುತ್ತಾ ನಡೆಯುತ್ತಿದ್ದೆ. ಆಕಾಶ ಶುಭ್ರವಾಗಿತ್ತು. ಗಾಳಿಯಲ್ಲಿ ಸಂಪಿಗೆ ಹೂವಿನ ಪರಿಮಳ ತೇಲಿ ಬರುತ್ತಿತ್ತು. ಹಕ್ಕಿಗಳ ಕಲರವ, ಹುಲ್ಲಿನ ಮೇಲೆ ಹಾರುವ ಕೀಟಗಳ ಕಿಚಿಕಿಚಿ, ಹೂಗಳ ಮಕರಂದ ಹೀರುವ ದುಂಬಿಗಳ ಝೇಂಕಾರ ಇವುಗಳೆಲ್ಲಾ ಕಣ್ಣು, ಕಿವಿ ತುಂಬುತ್ತಿದ್ದವು.

ಇದ್ದಕ್ಕಿದ್ದಂತೇ ಬೇರೆಯೇ ರೀತಿಯಲ್ಲಿ ಕೂಗುವ ಹಕ್ಕಿಗಳ ಕೂಗು ಕಿವಿಗೆ ಬಿತ್ತು. ಅದು ಮಾಮೂಲಿನ ಕೂಗಲ್ಲ. ಏನೋ ಅಪಾಯದ ಆಕ್ರಂದನದಂತೇ ಕೇಳಿಸಿತು. ನನ್ನ ಕಣ್ಣುಗಳು ಅವುಗಳ ಸ್ವರದ ಮೂಲ ಹುಡುಕ ಹೊರಟವು. ಅಲ್ಲೇ ಹತ್ತಿರದಲ್ಲಿದ್ದ ಜಮ್ಮು ನೇರಳೆ ಮರದಿಂದ ಈ ಕೂಗು ಕೇಳಿ ಬರುತ್ತಿತ್ತು. ಆ ಮರಕ್ಕೆ ತಾಕಿದಂತೆ ಒಂದು ಸತ್ತು ಹೋದ ಅಡಿಕೆ ಮರವೂ ಇತ್ತು. ಆ ಅಡಿಕೆ ಮರದ ತುಂಬೆಲ್ಲಾ ಸಣ್ಣ ದೊಡ್ಡ ಉರುಟುರುಟಿನ ತೂತುಗಳು. ನನ್ನ ದೃಷ್ಟಿಯನ್ನು ಇನ್ನಷ್ಟು ಸೂಕ್ಷ್ಮವಾಗಿಸಿದೆ. ಮರಕ್ಕೆ ಸುತ್ತು ಹೊಡೆಯುತ್ತಾ ಎರಡು ಹಕ್ಕಿಗಳು ಅತ್ತಿತ್ತಾ ಹಾರುತ್ತಾ ಇದ್ದವು. ಹೆಚ್ಚೇನು ಗಾಳಿ ಬೀಸದಿದ್ದರೂ ಜಂಬುನೇರಳೆ ಮರದ ಒಂದು ಕೊಂಬೆಯ ಎಲೆಗಳು ವಿಚಿತ್ರ ಕಂಪನದಿಂದ ಅದುರುತ್ತಿದ್ದವು. ಅದನ್ನು ಸರಿಯಾಗಿ ಗಮನಿಸಿದಾಗ ನನ್ನ ಗುಂಡಿಗೆ ಭಯದಿಂದ ವೇಗವಾಗಿ ಹೊಡೆದುಕೊಳ್ಳತೊಡಗಿತು.




ಸುಮಾರು ಆರೇಳು ಅಡಿ ಉದ್ದದ ಕೇರೆ ಹಾವೊಂದು ಮರದ ಮೇಲೆ ಯಾವುದೋ ಗಮ್ಯವನ್ನರಸಿ ಸರ ಸರನೇ ಹೋಗುತ್ತಿದೆ. ಅದರ ಆ ಅವಸರವೇ ಹಕ್ಕಿಗಳ ಈ ಕೂಗಿಗೆ ಕಾರಣ. ಪಾಪ ಪುಟ್ಟ ಹಕ್ಕಿಗಳು. . ಮರದ ಮೇಲೆ ಅವರ ಗೂಡಿತ್ತೋ ಏನೋ. . ಗೂಡಲ್ಲಿ ಹಾರಲು ಬಾರದ ಮರಿಗಳು. . ಮನಸ್ಸು ಭಾರವಾಯಿತು. ಆ




ಹಾವು ಅಡಿಕೆ ಮರದ ಪೊಟರೆಗಳೊಳಗೆ ತಲೆ ತೂರಿಸಿ ಆಹಾರವನ್ನರಸುತ್ತಿತ್ತು.

ಈಗ ಹಕ್ಕಿಗಳು ಹಾರಾಡುವ ವೇಗ ಜಾಸ್ತಿಯಾಯಿತು. ಅವುಗಳ ಕೂಗೂ ಇನ್ನಷ್ಟು ಜೋರಾಯಿತು. ಪಟ ಪಟ ರೆಕ್ಕೆ ಬಡಿಯುತ್ತಾ ವೇಗವನ್ನು ರೂಢಿಸಿಕೊಂಡು ಹಕ್ಕಿಗಳೆರಡೂ ಹಾವಿನ ಮೈಗೆ ಕೊಕ್ಕಿನಿಂದ ಕುಕ್ಕಿ ಆಕ್ರಮಣ ಮಾಡಲು ತೊಡಗಿದವು. ಮೊದ ಮೊದಲು ತನ್ನ ಮೈಯನ್ನು ಕೊಡವುತ್ತಾ ಮುಂದಕ್ಕೆ ಚಲಿಸುತ್ತಿದ್ದ ಹಾವಿಗೆ ಈಗ ತೆವಳಲೂ ಅವಕಾಶ ನೀಡದಂತೆ ಅದರ ಮುಖಕ್ಕೆ ಚೂಪಾದ ಕೊಕ್ಕಿನಿಂದ ಕುಕ್ಕತೊಡಗಿದವು. ಹಾವು ಸ್ವಲ್ಪವೇ ಸ್ವಲ್ಪ ತನ್ನ ಬಾಲದ ಭಾಗವನ್ನು ಅಡಕೆ ಮರಕ್ಕೆ ಬಿಗಿಯಾಗಿ ಸುತ್ತಿ ಹಿಡಿದುಕೊಂಡು ತಪ್ಪಿಸಿಕೊಳ್ಳಲು ಹೆಣಗಿತು. ಈಗ ಆಕ್ರಮಣದ ರೀತಿ ಬದಲಾಯಿತು. ಒಂದು ಹಕ್ಕಿ ಅದರ ಮೈಯನ್ನು ಕುಕ್ಕಿದರೆ ಮತ್ತೊಂದು ಮುಖದ ದಾಳಿಯನ್ನು ಮುಂದುವರಿಸಿತು. ಹಾವು ಮರದ ಮೇಲೆ ತನ್ನ ಹಿಡಿತ ಕಳೆದುಕೊಂಡು ದೊಪ್ಪನೆ ಕೆಳಗೆ ಬಿತ್ತು. ಉಸಿರು ಬಿಗಿ ಹಿಡಿದು ನಿಂತಿದ್ದ ನಾನು ಯುದ್ಧ ಮುಗಿದ ಸಂತಸದಲ್ಲಿ ನಿಟ್ಟುಸಿರು ಬಿಟ್ಟೆ. ಆದರೆ ಹಕ್ಕಿಗಳು ಆಕಾಶದಲ್ಲಿ ಇನ್ನೂ ಮರದ ಸುತ್ತು ಸುತ್ತುವುದನ್ನು ಮುಂದುವರಿಸಿದ್ದವು. ಸ್ವಲ್ಪ ಹೊತ್ತು ಬಿದ್ದಲ್ಲೇ ಬಿದ್ದಿದ್ದ ಹಾವು ತೆವಳುತ್ತಾ ಅಲ್ಲಿಂದ ಸರಿದು ಮಾಯವಾಯಿತು.




ಎಷ್ಟೋ ಸಲ ತಮ್ಮ ಮೊಟ್ಟೆಗಳನ್ನು ಹಾವಿನ ಹಸಿವಿಂಗಿಸುವುದಕ್ಕಾಗಿ ಬಲಿ ಕೊಟ್ಟಿರಬಹುದು. ಆದರೆ ಮತ್ತೆ ಮತ್ತೆ ಗೂಡು ಕಟ್ಟಿ ಮರಿ ಮಾಡಿ ಪೋಷಿಸುವ ಹುಮ್ಮಸ್ಸನ್ನು ಕಳೆದುಕೊಳ್ಳಲಿಲ್ಲ. ಹಾಗಾಗಿಯೇ ಆ ದಿನದ ಗೆಲುವು ಹಕ್ಕಿಗಳದ್ದು..ನನ್ನ ಮನದೊಳಗೆ "ಗೆದ್ದೆ ಗೆಲ್ಲುವೆವು ಒಂದು ದಿನಾ. ." ಎಂಬ ಹಾಡು ಮೊಳಗತೊಡಗಿತು.

ಆದರೆ ನಾವೇಕೆ ಪ್ರಯತ್ನಗಳಿಗೆ ಅಂಜುತ್ತೇವೆ? ಸಮಸ್ಯೆಗಳು ಬಂದಾಗ ಅದನ್ನು ನಿವಾರಿಸುವುದನ್ನು ಬಿಟ್ಟು ಹೆದರಿ ಹಿಂದೆ ಸರಿಯುತ್ತೇವೆ? ಸೋಲಿಗಾಗಿ ಅಳುಕುತ್ತೇವೆ? ಎಂದೋ ಒಂದು ದಿನ ಗೆಲುವು ನಮ್ಮ ಪಾಲಿಗೆ ಬರಬಹುದು ಎಂಬ ನಂಬಿಕೆಯನ್ನು ಕಳೆದುಕೊಂಡು ನಿರಾಸೆಯಿಂದಿರುತ್ತೇವೆ.? ಕಷ್ಟ ಬಂದಾಗ ಎದೆಗುಂದದೇ ಮುನ್ನುಗ್ಗಿ ಹೋರಾಡುವುದು ಮುಖ್ಯ. ಸೋಲೇ ಬಂದರೂ ಅದು ವೀರೋಚಿತವಾಗಿಯೇ ಇರುತ್ತದೆ. ಸೋಲಿಗೆ ಅಂಜಿ ಯುದ್ಧ ಪ್ರಾರಂಭವಾಗುವ ಮೊದಲೇ ಪಲಾಯನ ಮಾಡುವುದನ್ನು ಬಿಡಿ. ಯಾಕೆಂದರೆ ಗೆಲ್ಲುವ ಮನಸ್ಸಿದ್ದವರನ್ನೆಂದೂ ಸೋಲಿಸಿದ್ದಿಲ್ಲ. . !

- ಅನಿತಾ ನರೇಶ್ ಮಂಚಿ

ದ.ಕ.ಜಿಲ್ಲೆ

# ಬುಗರಿಕಲ್ ಭಾಗ- 2




ಕತ್ತಲಾಗುತ್ತಿದೆ ಎಂದು ಸುತ್ತಣ ಪ್ರಪಂಚಕ್ಕೆ ಸಾರಿ ಹೇಳುತ್ತಿರುವ ಹಕ್ಕಿಗಳ ನಾದ, ಮನೆಗಳಿಗೆ ಹೊರಡಲು ತಮ್ಮ ತಮ್ಮ ಮಕ್ಕಳನ್ನು ಕರೆಯುತ್ತಿರುವ ಜಾನುವಾರುಗಳ ಕೂಗು, "ನಾಳೆ ಸಿಗುತ್ತೇನೆ ಬರಲೆ . . . ಬಾಯ್" ಎಂದು ಹೇಳಿ ಹೊರಡಲು ಸನ್ನದ್ಧವಾಗಿ ಪಡುವಣದಲ್ಲಿ ನಿಂತಿರುವ ಕೆಂಪನೆಯ ಸೂರ್ಯ ಎಲ್ಲವೂ ನಮಗೆ ಅರಿವಿಲ್ಲದಂತೆ ಬುಗರಿಕಲ್ ನೈಟ್ ಟ್ರಕ್ಕಿಂಗ್ ಗೆ ಹೊರಟಿದ್ದ ತ್ರಿಮೂರ್ತಿಗಳಾದ ಅಶ್ವಥ್, ಶಂಕರಪ್ಪ ಹಾಗೂ ನನ್ನ ಕಾಲುಗಳನ್ನು ಸ್ಪೀಡ್ ಮಾಡಿದವು .

ಅಂದು 'ಗೌರ್ಮೆಂಟ್ ಹಾಲಿಡೇ' ಇದ್ದುದರಿಂದ ನಮ್ಮ ಬುಗರಿಕಲ್ ನ ಮೊದಲ ಬೇಟಿಯಲ್ಲಿಯೇ ಬೇಸಿಗೆ ಮುಗಿಯುವುದರೊಳಗೆ ಮತ್ತೊಮ್ಮೆ ಬರಬೇಕೆಂದು ಧೃಡನಿರ್ಧಾರ ಮಾಡಿದ್ದ ನಮಗೆ ಇದೇ ಪ್ರಶಸ್ತವಾದ ದಿನ ಎಂದು ಸಂಜೆ ನಮ್ಮ ಸಲಕರಣೆಗಳನ್ನು, ರಾತ್ರಿ ಊಟವನ್ನು ಪ್ಯಾಕ್ ಮಾಡಿಕೊಂಡು ಕಾಡಿನ ಕಡೆ ಹೊರಟೆವು. ನಮ್ಮ ಡಿಪಾರ್ಚರ್ ಏನೋ ಕರೆಕ್ಟ್ ಸಮಯಕ್ಕೆ ಆದರೂ ನಮ್ಮ ಜರ್ನಿ ಟೈಮ್ ಲೆಕ್ಕಿಸುವುದರಲ್ಲಿ ತಪ್ಪಾಗಿದ್ದುದರಿಂದ ವಾಚ್ ಟವರ್ ಮುಟ್ಟಬೇಕೆಂದಿದ್ದ ನಮ್ಮ ಗುರಿ ಸ್ವಲ್ಪ ಮುಂದೂಡಲ್ಪಟ್ಟಿತ್ತು. ನಮ್ಮ ಬರುವಿಕೆಯನ್ನು ನೈಟ್ ಡ್ಯೂಟಿ ಮೇಲಿದ್ದ ವಾಚರ್ಸ್ ಆದ ಮರಿಲಿಂಗಪ್ಪ ಮತ್ತು ರಘು ರವರಿಗೆ ಮೊದಲೇ ತಿಳಿಸಿದ್ದರಿಂದ ಅವರು ನಮ್ಮ ಬರುವಿಕೆಯನ್ನು ಕಾಯುತ್ತಿದ್ದರು. ತಂಪಾಗಿ ಸುಯ್. . . ಎಂದು ಬೀಸುವ ಗಾಳಿ ಕಾನನದ ನೀರವ ಮೌನ, ಆಗೊಮ್ಮೆ ಹೀಗೊಮ್ಮೆ ಕೇಳಿಸುವ *"ಚುಳುಕ್. . .ಚುಳುಕ್. . .ಚುಳುಕ್"*. . .,ನೈಟ್ ಜಾರ್ , ಗೂಬೆ ಹಾಗೂ ಕೆಲವು ಪ್ರಾಣಿಗಳ ಸದ್ದನ್ನು ಆಲಿಸುತ್ತಾ ವಿಶ್ರಮಿಸಿ, ಊಟ ಮುಗಿಸಿದ ನಾವು ಕತ್ತಲೆರಾಜನ ಜೊತೆ ಟಾರ್ಚ್ ಹಿಡಿದು ಪ್ರಾಣಿ ನೋಡಲು ಜಗಳವಾಡಿ ಕಾಡನ್ನು ಶೋಧಿಸಿ ಯಾವ ಪ್ರಾಣಿಗಳು ಕಾಣದಿದ್ದುದಕ್ಕೆ ಸೋತು ಕತ್ತಲೆರಾಜ ನಿಗೆ ಶರಣಾದೆವು.




ತಮ್ಮ ಜೀವನದ ಅರ್ಧಭಾಗವನ್ನು ಕಾಡಿನಲ್ಲೇ ಕಳೆಯುವ ವಾಚರ್ ಗಳ ಅನುಭವಗಳನ್ನು ತಿಳಿಯಲು ಕೌತುಕನಾಗಿದ್ದ ನಾನು "ನೀವು ಈ ಕಾಡ್ನಲ್ಲಿ ತುಂಬಾ ವರ್ಷಗಳಿಂದ ಕೆಲ್ಸ ಮಾಡ್ತಿದೀರಲ್ಲ, ಈ ಹಸಿರು ತಂಪಾದ ಗಾಳಿ ಪ್ರಾಣಿಗಳು ಎಲ್ಲಾ ನಿಮ್ಗೆ ಖುಷಿ ನೀಡಿರ್ಬೇಕು ಅಲ್ವ" ಎಂದೆ. "ಅಯ್ಯೋ ಸುಮ್ನೆ ಇರಿ ಸ್ವಾಮಿ ಇತ್ಗಿಂತ ಕೂಲಿ ಕೆಲ್ಸ ಉತ್ಮಹಗ್ಲೂ ದುಡ್ಡು .

ಇದ್ರಲ್ಲಿ ಹಗ್ಲೂ ಅನ್ನಂಗಿಲ್ಲ .ರಾತ್ರಿ ನೆಮ್ಮದಿಯಿಂದ ಮನೆ ಸೇರ್ಕೋಬೋದು, ರಾತ್ರಿ ಅನ್ನಂಗಿಲ್ಲ, ಹಬ್ಬ ಅನ್ನಂಗಿಲ್ಲ ಹರಿದಿನ ಅನ್ನಂಗಿಲ್ಲ, ಯಾವಾಗ್ಲೂ ಕಾಡ್ನಲ್ಲೇ ಸಾಯ್ಬೇಕು". ಎಂಬ ಸುಮಾರು ಇಪ್ಪತ್ತು ವರ್ಷಗಳಿಂದ ವಾಚರ್ ಕೆಲಸಮಾಡುತ್ತಿದ್ದ ಮರಿಲಿಂಗಣ್ಣನವರ ಮಾತುಗಳನ್ನು ಕೇಳಿ ಆಶ್ಚರ್ಯವೆನಿಸಿತು .



"ಅಲ್ಲ ಮರಿಲಿಂಗಣ್ಣ ಈ ಕೆಟ್ಟ ಗಾಳಿ, ಧೂಳು, ಜನ ಜಂಗುಳಿಗಳ ಮಧ್ಯೆ ಇರೋದ್ಕಿಂತ ಉತ್ತಮ ಅಲ್ವಾ? ಮತ್ತೂ ಯಾವ್ ಕಾಯ್ಲೆಗಳು ಬರಲ್ಲ" ಎಂದೆ, "ಊರ್ಗಾಳೇನೋ ಕೊಳಕೆ ಸಾಮಿ ಒಪ್ಕೋತಿನಿ, ಆದ್ರೆ ಆ ಕೊಳಕು ಊರ್ಗಳಲ್ಲಿ ಇದ್ದು ಕಾಯ್ಲೆ ಬಂದ್ರೆ ವಾಸಿನಾದ್ರೂ ಮಾಡ್ಕೊ ಬೋದು ಸಾಮಿ, ಇಲ್ಲಿ ಆನೆಗಳ ಕೈಗೆ ಸಿಕ್ಕಾಕೊಂಡ್ರೆ, ಒಂದೇ ಏಟ್ಗೆ ಸಾಯ್ಬೇಕಲ್ಲ ಯಾವಾಗ್ ಸಾವ್ ಬರುತ್ತೋ ಗೊತ್ತೇ ಆಗಲ್ವಲ್ಲ ಇಲ್ಲಿ. ಅಷ್ರಲ್ಲಿ ನಮ್ಮ ಹೆಂಡ್ರು ಮಕ್ಳು ಬೀದಿ ಪಾಲಾಗ್ದೆ ಇರ್ಲಿ ಅಂತ ದುಡ್ದಾದ್ರು ಕೂಡಿ ಮಡ್ಗಾಣ ಅಂದ್ರೆ ಇವರು ಕೊಡೋ ಸಂಬ್ಳ ನಮ್ ಕೈ ಸೇರೋದೇ ಆರು ತಿಂಗ್ಳುಗೋ ವರ್ಷಕ್ಕೋ ಒಮ್ಮೆ. ಈ ಕೆಲ್ಸ ನಂಬ್ಕೋಂಡ್ ಮಕ್ಳುಗಳನ್ನ ಎಂಗೆ ಓದ್ಸೋದು? ಅವ್ಕೆ ಕಾಯ್ಲೆ ಬಂದ್ರೆ ಎನ್ ಮಾಡೋದು? ಏನೋ ಕೈಲಿ ಗೌರ್ಮೆಂಟ್ ಕೆಲ್ಸ ಅದೇ ಅಂತ ನಮ್ಗೆ ನಾವೇ ಸಮಾಧಾನಪಟ್ಕೋಬೇಕು ಅಷ್ಟೆ" ಎಂದರು. "ನೀವು ನಿಮ್ಮ ಆಫೀಸರ್ನ ಕೇಳೋದು, ನೀವು ಇಂಗೆ ಆರ್ ತಿಂಗ್ಳುಗೋ ವರ್ಷಕ್ಕೋ ಸಂಬ್ಳ ಕೊಟ್ರೆ ನಾವ್ ಎಂಗೆ ಸಂಸಾರ ಮಾಡೋದು? ಅಂತ" ಎಂದ ನಮ್ಮ ಫ್ರೆಂಡ್ ಮಾತಿಗೆ "ಅಯ್ಯೋ ನಾವು ಇಲ್ಲಿ ಕುಡ್ಯಕೆ ನೀರಿಲ್ಲ ಏನಾದ್ರೂ ವ್ಯವಸ್ಥೆ ಮಾಡ್ಕೊಡಿ ಸಾರ್" ಅಂತ ಮೊನ್ನೆ ಬಂದಾಗ ಕೇಳುತ್ಕೆ, "ಅಲ್ಲ ಕಣ್ರಯ್ಯ ಹಳ್ಳದು ನೀರು ಕಾಡ್ನಲ್ಲಿ ಇರೋ ಮರ್ಗಳ್ ಬೇರ್ ಮೇಲೆಲ್ಲಾ ಹರ್ಕೋ ಬತ್ತದೆ ಅದನ್ನ ಕುಡುದ್ರೆ ಯಾವ್ ಕಾಯ್ಲೆನು ಬರಲ್ಲ ಅದನ್ನ ಬಿಟ್ಟು ಬೇರೆ ನೀರ್ ಕೇಳ್ತೀರಲ್ಲ" ಅಂದ್ರು ಬಿಸ್ಲೆರಿ ನೀರ್ನ ಕುಡ್ಯೋ ಆಫೀಸರ್ರು. ಇನ್ನೇನ್ ಮಾಡೋದು ಅಂತ ಹಳ್ಳದ್ ನೀರ್ನೇ ತಂದು ಅನ್ನ ಮಾಡುದ್ರೆ ಹರಿಶಿನ ಪುಡಿನೇ ಹಾಕೋದ್ ಬ್ಯಾಡ, ಅನ್ನ ಚಿತ್ರಾನ್ನತರ ಆಯ್ತುದೆ. ಅಂತ ನೀರ್ನೇ ಕುಡೀರಿ ಅಂದೋರು ನಮ್ಗೆ ತಿಂತಿಂಗ್ಳು ಸಂಬ್ಳ ಬರಂಗೆ ಮಾಡ್ರಿ ಅಂದ್ರೆ ಮಾಡ್ತಾರ ಅಂತ ಸುಂನಾದೋ" ಎಂಬ ಅವರ ಉತ್ತರವನ್ನು ಕೇಳಿ ಇಲ್ಲಿಯ ತನಕ ವಾಚರ್ ಕೆಲಸ ಮಾಡುವವರು ಅದೃಷ್ಟವಂತರು ಯಾವಾಗ್ಲೂ ಕಾಡಿನಲ್ಲೇ ಇರಬಹುದು ಎಲ್ಲಾ ಪ್ರಾಣಿ ಪಕ್ಷಿನೂ ನೋಡಬಹುದು ಎಂದು ತಿಳಿದಿದ್ದ ನನಗೆ, ಇವರ ಕೆಲವು ತೊಂದರೆಗಳನ್ನಷ್ಟೇ ಕೇಳಿ ಇವರ ಕೆಲಸ ನಿಜವಾಗಿಯೂ ವನವಾಸವೇ ಎಂದೆನಿಸಿತು. ಇವರ ಈ ತೊಂದರೆಗಳಿಗೆ ಪರಿಹಾರಗಳನ್ನು ಯೋಚಿಸುತ್ತಾ ವ್ಯವಸ್ಥೆಯನ್ನು ಮನದಲ್ಲೇ ಶಪಿಸುತ್ತಾ ಎಲ್ಲರೂ ನಿದ್ರೆಗೆ ಜಾರಿದೆವು.



ಬುಗರಿಕಲ್ ಟವರ್ ನಾನು ಮೊದಲೇ ತಿಳಿಸಿರುವಂತೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ದಕ್ಷಿಣ ಭಾಗದಲ್ಲಿ ಕಂಡುಬರುತ್ತದೆ. ಅಕ್ಕ ಪಕ್ಕದಲ್ಲಿರುವ ಎರಡು ಸಣ್ಣ ಕೆರೆಗಳು ಟವರ್ ಮೇಲಿಂದ ನೋಡಿದರೆ ಕಾಣುವ ವಿಶಾಲವಾದ ವನ್ಯರಾಶಿ ಅಲ್ಲಿ ಉಳಿಯುವಂತೆ ಪ್ರೇರೇಪಿಸಿತ್ತು. ನಾವು ಕಾಡಿನಲ್ಲೇ ಇದ್ದುದರಿಂದ ಮುಂಜಾನೆ ಪಕ್ಷಿವೀಕ್ಷಣೆಗೆ ಪ್ರಶಸ್ತವೆಂದು, ಬೇಗನೆ ಎದ್ದು ವಾಚರ್ ಗಳಿಗೆ ವಂದಿಸಿ, ಪಕ್ಷಿವೀಕ್ಷಣೆ ಮಾಡುತ್ತಾ, ಕ್ಯಾಮೆರಾದಲ್ಲಿ ಸೆರೆಹಿಡಿಯುತ್ತಾ, ಟವರ್ ಪಕ್ಕದಲ್ಲಿದ್ದ ಕೆರೆಗೆ ಬರುವಷ್ಟರಲ್ಲಿ ಸೂರ್ಯ ಸ್ವಲ್ಪ ಬಿಸಿ ಮುಟ್ಟಿಸುವಷ್ಟು ಮೇಲೇರಿದ್ದ. "ಏಯ್. . . ಕೆಳುಸ್ತಾ ಆನೇ ಕೂಕೊಂಡುದ್ದು? ಆನೆ ನೀರ್ ಕುಡ್ಯಕ್ಕೆ ಬರ್ಬೋದು, ಈಗ ಇಲ್ಲೇ ಇದ್ರೆ ನೋಡ್ರಪ್ಪ ಆನೆ ನೋಡಕ್ಕೆ ಒಳ್ಳೆ ಚಾನ್ಸ್" ಎಂದು ದೂರದಲ್ಲಿ ಕೂಗಿದ. ಆನೆಯ ಕೂಗನ್ನು ಕೇಳಿಸಿಕೊಂಡು ಅಶ್ವಥ್ ರವರು ಪಕ್ಷಿವೀಕ್ಷಣೆಯಲ್ಲಿ ನಿರತರಾಗಿದ್ದ ನಮಗೆ ಹೇಳಿದರು. ಇನ್ನೂ ನಿಶ್ಚಯಿಸದೆ ಮುಖ-ಮುಖ ನೋಡಿಕೊಳ್ಳುತ್ತಿದ್ದ ನಮ್ಮನ್ನು ಕಂಡು, "ನಾವು ಹೋಗಬೇಕಾಗಿರೋ ದಾರೀಲೇ ಅವು ಇರ್ಬೇಕು ಅನ್ಸುತ್ತೆ. ಆ ಕಡೆ ಇಂದಾನೇ ಸೌಂಡ್ ಬಂದದ್ದು ಏನ್ ಮಾಡಾಣ?" ಎಂಬ ಪ್ರಶ್ನೆಗೆ "ಹ್ಞೂ ಸರಿ ಆ ಹುಣಸೆ ಮರ ಅತ್ತಿ ಕೂತ್ಕೋಂಡ್ರೆ ಎಂಗೆ?" ಎಂದು ಕೆರೆಯ ಪಕ್ಕದಲ್ಲಿಯೇ ಇರುವ ದೊಡ್ಡ ಹುಣಸೆ ಮರವನ್ನು ತೋರಿಸಿ ಶಂಕರಪ್ಪನವರು ಹೇಳಿದರು.



ಒಳ್ಳೆ ಪ್ಲಾನ್, ಫೋಟೋನು ಚೆನ್ನಾಗಿ ಹಿಡಿಬೋದು ಎಂದು ಎಲ್ಲರೂ ಮರದ ಬುಡದಲ್ಲಿ ಚಪ್ಪಲಿಗಳನ್ನು ಮಾತ್ರ ಬಿಟ್ಟು ಬ್ಯಾಗ್ ಕೆಳಗಿಟ್ಟರೆ ಆನೆ ಕಣ್ಣಿಗೆ ಬಿದ್ದರೆ ತೊಂದರೆ ಎಂದು ತಿಳಿದು ಬ್ಯಾಗ್ ಕ್ಯಾಮೆರಾ ಎಲ್ಲವನ್ನೂ ತೆಗೆದುಕೊಂಡು ಅವರವರ ತೂಕ ತಡೆಯುವಷ್ಟು ದೊಡ್ಡದಾದ ಹಾಗೂ ಆನೆಗೆ ಎಟುಕದಷ್ಟು ಎತ್ತರದಲ್ಲಿರುವ ರೆಂಬೆಗಳನ್ನು ಹುಡುಕಿ ಕುಳಿತ ತಕ್ಷಣವೇ ನಾಟಕೀಯ ರೀತಿಯಲ್ಲಿ ಮೂರು ಜಿಂಕೆಗಳು ನೀರು ಕುಡಿಯಲು ಬಂದವು. ನಮ್ಮನ್ನು ಗಮನಿಸದ ಅಪ್ಪ, ಅಮ್ಮ, ಮರಿ ಜಿಂಕೆಗಳು ನಿಧಾನವಾಗಿ ಸಂತೃಪ್ತಿಯಿಂದ ನೀರು ಕುಡಿದು ಆಟವಾಡುತ್ತಾ, ನಮ್ಮ ಕ್ಯಾಮೆರಾಗೆ ಒಳ್ಳೆ ಫೋಸ್ ನೀಡಿ ಹೊರಟು ಹೋದವು. ಆನೆಯನ್ನು ಕಾಯುತ್ತಾ ಕುಳಿತಿದ್ದ ನಮಗೆ ಒಂದು ಘಂಟೆಯಾದರೂ ಆನೆ ಬಾರದಿದ್ದುದನ್ನು ಕಂಡು ಹೊಟ್ಟೆ ಹಸಿವನ್ನು ತಾಳಲಾರದೇ ಮರ ಇಳಿದು ಕೆರೆಯ ಪಕ್ಕದಲ್ಲಿಯೇ ಹೊರಡುವ ಕಾಲು ದಾರಿಯಿಡಿದೆವು. ಎರಡು ಹೆಜ್ಜೆ ಹೋಗುವಷ್ಟರಲ್ಲಿಯೇ ಬೇಲಿಯಲ್ಲಿ ಸರಸರ ಎಂಬ ಸದ್ದು ಕೇಳಿ ಮನದಲ್ಲಿ ಆನೆಯನ್ನೇ ಯೋಚಿಸುತ್ತಿದ್ದ ನಾನು ಆನೆಯೇ ಇರಬೇಕೆಂದು ರೆಡಿಯಾಗಿ ಓಡಲು ನಿಂತಿದ್ದೆ ಅಷ್ಟರಲ್ಲಿಯೇ "ಶ್. . . . . . . ಶ್ . . . . ಹಂದಿ. . . ಹಂದಿ ನಮ್ಮುಂದೆ ಈಗ ಪಾಸ್ ಆಯ್ತುವೆ ಯಾರು ಅಲ್ಲಾಡ್ಬೇಡಿ. ಶಂಕ್ರ ಫೋಟೊ ಹಿಡಿ ಸಕ್ಕತ್ತಾಗ್ ಬರ್ಬೇಕು" ಎಂದ ಮುಂದಾಳಾದ ಅಶ್ವಥ್ ರವರ ಮೆಲ್ಲನೆಯ ಮಾತು ಕೇಳಿ ಸ್ವಲ್ಪ ಸಮಾಧಾನದಿಂದ ತಟಸ್ಥನಾಗಿ ನಿಂತೆ.

- ಮುಂದುವರಿಯುವುದು. . . .

- ನಾಗೇಶ್.ಓ.ಎಸ್




# ಹಕ್ಕಿ ಲೋಕ

ವೈಜ್ಞಾನಿಕ ಹೆಸರು : *Megalalaima haemacephala*

ಇಂಗ್ಲೀಷ್ ಹೆಸರು : **Coppersmith Barbet**

ಅದು ನಮ್ಮ ಪೋಟೋಗ್ರಫಿಯ ಕಲಿಕೆಯ ದಿನಗಳು, ಪಕ್ಷಿ ವೀಕ್ಷಣೆ ನಮ್ಮ ಕಸುಬಾದರೂ, ಹಕ್ಕಿಗಳ ಪೋಟೋಗ್ರಫಿಯ ಮೊದಲ ಪುಟ್ಟ ಹೆಜ್ಜೆಗಳು, ಆಗ ನಮ್ಮ ಬಳಿ ಇದ್ದಿದ್ದು ಒಂದು ಸಣ್ಣ ಸ್ಟಿಲ್ ಕ್ಯಾಮರ ಅದರಲ್ಲಿಯೇ ಹಕ್ಕಿಗಳ ಪೋಟೋಗ್ರಫಿ ಮಾಡಲು ಹೋಗಿ ಬರಿಗೈಯಲ್ಲಿ ಮರಳುತ್ತಿದ್ದದ್ದು. ಏಕೆಂದರೆ ಆ ಕ್ಯಾಮರದಲ್ಲಿ ನಾವು ಅಂದುಕೊಂಡ ಹಾಗೆ ಬರಬೇಕಲ್ಲ!, ಮರದ ಕೊಂಬೆಯ ಮೇಲೆ ಕುಳಿತ್ತಿರುವ ಹಕ್ಕಿ ಮಾತ್ರ ಪೊಕಸ್ ಆಗಿ, ಉಳಿದ ಬ್ಯಾಗ್ರೋಂಡ್ ಎಲ್ಲ ಬ್ಲರ್ ಆಗಿ ಬರಬೇಕು, ಫ್ರೇಮ್ ಹಾಗಿರಬೇಕು, ಹೀಗಿರಬೇಕು ಎಂದೆಲ್ಲ ಅಂದುಕೊಂಡರೂ ಅದು ಬರುತ್ತಿರಲ್ಲಿಲ್ಲ, ಇನ್ನೂ ಆ ಸಣ್ಣ ಕ್ಯಾಮರವನ್ನು ಹಕ್ಕಿಗೆ ತುಂಬ ಸಮೀಪ ತೆಗೆದುಕೊಂಡು ಹೋಗಬೇಕು, ಹಕ್ಕಿಗಳು ಇರಬೇಕಲ್ಲ!, ಬಾಲ ತೋರಿಸಿ ಹಾರಿ ಹೋಗುತ್ತಿದ್ದವು. ಗೂಡಿನಲ್ಲಿರುತ್ತಿದ್ದ ಮೊಟ್ಟೆ-ಮರಿಗಳನ್ನು ಬಿಟ್ಟರೆ ಬೇರೆಯಾವ ದೊಡ್ಡ ಜೀವಿಗಳನ್ನು ಪೋಟೋಗ್ರಫಿ ಮಾಡಲಾಗುತ್ತಿರಲ್ಲಿಲ್ಲ.




ಈ ರೀತಿ ಪೋಟೋಗ್ರಫಿ ಮಾಡಲು ಆಗುವುದಿಲ್ಲ!, ಹಕ್ಕಿಗಳಿಗೆ ಬಹಳ ಸಮೀಪದಲ್ಲಿ ನಿಂತು ಪೋಟೋ ತೆಗೆದರೆ ಮಾತ್ರ ತೆಗೆಯಲಾಗುವುದು ಎಂಬ ನನ್ನ ವಾದಕ್ಕೆ ಸಮ್ಮತ್ತಿಸಿದ ಗೆಳೆಯ ಶಂಕ್ರಪ್ಪ, ತೋಟದ ಕುಟೀರದ ಕೆಳಗೆ ಇರುವ ಕೆರೆಯಲ್ಲಿ ಒಂದು ಬೋಳಾಗಿರುವ ರೆಂಬೆಯನ್ನು ತಂದು ನೀರಿನ ಹಂಚಿನಲ್ಲಿ ನಿಲ್ಲಿಸಿ, ಎಷ್ಟು ಹತ್ತಿರ ಕುಳಿತು ಪೋಟೋ ತೆಗೆದರೆ ಚೆನ್ನಾಗಿ ಬರುವುದು ಎಂದು, ಒಂದು ಕಲ್ಲನ್ನು ಕೊಂಬೆಯ ಮೇಲೆ ಇರಿಸಿ, ಯಾವ ಆಂಗಲ್ ನಿಂದ ಎಷ್ಟು ದೂರದಿಂದ ಪೋಟೋ ತೆಗೆದರೆ ಬ್ಯಾಗ್ರೊಂಡ್ ಎಲ್ಲ ತುಂಬ ಬ್ಲರ್ರಾಗಿ ಬರುತ್ತದೆ ಎಂದು ಪರೀಕ್ಷಿಸಿ, ಇಲ್ಲಿ ಹೈಡ್ ಮಡಗಿದರೆ ಸೂಕ್ತ ಎಂದು ನಿರ್ಧರಿಸಿದ್ದೆವು.

ಕೆರೆಯ ನೀರಿನ ಅಂಚಿನಲ್ಲಿ ನಾವು ನೆಟ್ಟಿದ ಕೊಂಬೆಯ ಮೇಲೆ ಒಂದು ಕಿರು ಮಿಂಚುಳ್ಳಿ, ಮೀನುಗಳನ್ನು ಬೇಟೆ ಮಾಡಲು ಕುಳಿತುಕೊಂಡಿತ್ತು. ಈ ಕಿರು ಮಿಂಚುಳ್ಳಿಯು ಮೀನುಗಳ ಚಲನವಲನಗಳನ್ನು ಗಮನಿಸುತ್ತಾ ಚಂಗನೇ ನೀರಿಗೆ ಬಿದ್ದು ಮೀನನ್ನು ಬೇಟೆಮಾಡಿ ಕೊಂಬೆಯ ಮೇಲೆ ಕುಳಿತು ತಿನ್ನುತ್ತಿತ್ತು. ನಮಗೋ ಖುಷಿಯೋ ಖುಷಿ!, ನಾವು ನೆಟ್ಟಿದ್ದ ಕೊಂಬೆಯ ಮೇಲೆ ಹಕ್ಕಿಗಳು ಕೂರುತ್ತಿವೆ. ಅಲ್ಲಿ ಹೈಡ್ ಇಟ್ಟು ಪೋಟೋಗ್ರಫಿ ಮಾಡಬಹುದು ಎಂದು




ಇನ್ನೂ ನಮ್ಮ ಕೆಲ್ಸ ಹೈಡ್ ಮಾಡುವುದು.

ತೋಟದ ಮನೆಯ ಸುತ್ತಲಿನ ಜಾಗದಲ್ಲಿ ಆಳೆತ್ತರಕ್ಕೆ ಬೆಳೆದು ನಿಂತ್ತಿದ್ದ ಕಾಸಿಹುಲ್ಲುನ್ನು ಕೊಯ್ದು ತಂದು, ಬಿದಿರಿನಿಂದ ಚೌಕಾಕೃತಿಯಲ್ಲಿ ಒಂದು ಸಣ್ಣ ಮನೆಯಂತೆ ಒಬ್ಬರು ಒಳಗಡೆ ಕುಳಿತು ಕೊಳ್ಳುವಷ್ಟರ ಮಟ್ಟಿಗೆ ಹೈಡ್ ಮಾಡಿ, ಹೈಡ್ ನ ಮುಂಭಾಗ ಕ್ಯಾಮರವನ್ನು ಸೇರಿಸುವಷ್ಟು ಜಾಗ ಮಾಡಿ, ಕೆರೆಯ ಬಳಿ ಇದ್ದ ಕೊಂಬೆಯ ಹತ್ತಿರ ಇರಿಸಿ, ಶಂಕ್ರಪ್ಪ ಕ್ಯಾಮರ ಜೊತೆ ಒಳಗೆ ಕುಳಿತ್ತಿದ್ದ. ಪ್ರತಿದಿನ ಬಂದು ಮೀನು ಶಿಕಾರಿ ಮಾಡುತ್ತಿದ್ದ ಕಿರು ಮಿಂಚುಳ್ಳಿ ಆ ದಿನ ಬರಲೇ ಇಲ್ಲ!, ಶಂಕ್ರಪ್ಪನಿಗೆ ಕೊಪಬಂದು ಹೈಡ್ಗೆ ಒದ್ದು ಅಲ್ಲೇ ಬಿಸಾಡಿ ಬಂದ.

ಮಾರನೇ ದಿನ ಎದುರಿಗೆ ಬರುತ್ತಿದ್ದ ಗುರುಸಂತಪ್ಪನ್ನು ಅದೇನನ್ನೋ ಬೈದುಕೊಂಡು ಬರುತ್ತಿದ್ದ " ಬೋಳಿ ಮಕ್ಳು ಯಾರೋ. . .ಹುಲ್ಲಿನ ಚಿಕ್ಕಮನೆ ಮಾಡಿ, ಆ ಕೆರೆ ತಾವ ಮಡ್ಗವರೆ, ಏನ್ ಅಂಥ ಗೊತ್ತಾಗಿಲ್ಲ, ಏನೋ ಇಕ್ಮಥು ಮಾಡವರೆ" ಎಂದು ಹೇಳುತ್ತಿದ್ದ, ನಾವು ಒಳಗೊಳಗೆ ನಗುತ್ತಾ ನಮ್ಗೆ ಗೊತ್ತೇ ಇಲ್ಲ ಎಂಬಂತೆ ಸುಮ್ಮನೆ ನಟಿಸಿ ಹೋದೆವು. ಎದುರಿಗೆ ಸಿಕ್ಕ ಮುರಳಿಗೆ ಹೈಡ್ ಮಾಡಿರುವುದನ್ನು ಮತ್ತು ಗುರುಸಂತಪ್ಪನ ಅನುಮಾನ ಪಿಶಾಚಿಯನ್ನು ಹೇಳಿದೆವು. ಹೈಡ್ ಎಂದ ಕ್ಷಣ ನೆನಪು ಬಂದು "ಏ. . .ನಾನು ಒಂದು ಬಾರ್ಬೆಟ್ ಗೂಡು ನೋಡಿದ್ದೇನೆ, ಆ ಕುಟೀರದ್ದಿಂದೆ ಆಲದ ಮರ ಇದೆಯಲ್ಲ ಅದ್ರಲ್ಲಿ, ಒಂದು ರೆಂಬೆ ಒಣಗಿ ಹೋಗಿದೆ ಅದ್ರಲ್ಲಿ ಪೊಟರೆ ಮಾಡಿ ಗೂಡು ಮಾಡಿದೆ, ಅಲ್ಲಿ ಹೈಡ್ ಇಡ್ಕೊಂಡು ಫೋಟೋ ತೆಗೆಯಬಹುದು" ಎಂದ್ರು.

ಈ ಕುಟುರಗಳು, ಮರಕುಟುಕಗಳಂತೆಯೇ ಯಾವಾಗಲೂ ಒಣಗಿದ ಮರಗಳನ್ನೇ ಪೊಟರೆ ಮಾಡಲು ಆರಿಸಿಕೊಂಡು ತನ್ನ ಬಲವಾದ ಕೊಕ್ಕುಗಳಿಂದ ಒಣಗಿದ ಮರದ ಕೊಂಬೆಯನ್ನು ಕುಕ್ಕಿ ಪೊಟರೆ ಮಾಡುತ್ತವೆ. ಮುಂದೆ ಪೊಟರೆಯ ಬಾಯಿ ಚಿಕ್ಕದಾಗಿದ್ದರೂ ಒಳಗೆ ಮೊಟ್ಟೆಗಳಿಗೆ ಕಾವು ಕೊಡಲು ಅಗಲವಾದ ಜಾಗ ಮಾಡಿಕೊಂಡಿರುತ್ತವೆ. ಕುಟೀರದ ಪಕ್ಕದಲ್ಲಿರುವ ಆಲದ ಮರದ ಇಪ್ಪತ್ತು ಅಡಿ ಎತ್ತರದಲ್ಲಿ ಚಿಟ್ಟುಕುಟುರನ ಗೂಡನ್ನು ತೋರಿಸಿ, ಇಲ್ಲಿ ಹೈಡನ್ನು ಇರಿಸಿದರೆ ಫೋಟೋ ತೆಗೆಯಲು ಸರಿಯಿರುತ್ತದೆ ಎಂದು ಹೇಳಿದರು ಮುರಳಿ.

ಮಾರನೇ ದಿನವೇ ನಾವು ಹೈಡನ್ನು ಕೆರೆಯ ಬಳಿಯಿಂದ ಹೊತ್ತು ತರಲು ಹೋಗಿ ಹೈಡನ್ನು ಎತ್ತಿಕೊಂಡು ಸ್ವಲ್ಪ ದೂರ ಬಂದೆವು, ಶಂಕ್ರನು "ಏನ್ ಹೈಡ್ ಮಾರಾಯ ಇದು, ಪೋರ್ಟೆಬಲ್ ಹೈಡ್ ಇರಬೇಕು, ತೂಕ ಕಡಿಮೆ ಇರಬೇಕು ಮಡ್ಚಕೊಂಡು ಕೈಯಲ್ಲಿ ಇಡ್ಕೊಂಡು ಹೋಗ್ಬೇಕು ಆ ತರ ಇರ್ಬೇಕು, ಅದು ಬಿಟ್ಟು ಇದ್ನ ನೋಡು ಒಳ್ಳೆ ಹೆಣ ಎತ್ತಂಗದೆ, ಒಳ್ಳೆ ಹೆಣಬಾರ!, ಇಲ್ಲೆ ಇಳ್ಸು ಮಾರಾಯ ಏನ್ ತೂಕ", ಎಂದು ಸುಸ್ತಾಗಿ ಇಳಿಸಿ ಸುದಾರಿಸಿಕೊಂಡು ಹೇಗೋ ಮಾಡಿ

ಇಬ್ಬರೂನು ಒಂದು ಮರ ತೆಗೆದುಕೊಂಡು ಹೈಡ್ನ ಮಧ್ಯದಲ್ಲಿ ಈ ಕಡೆಯಿಂದ ಆ ಕಡೆಗೆ ತೂರಿಸಿ ಇಬ್ಬರು ಹೆಗಲ ಮೇಲೆ ಇಟ್ಟುಕೊಂಡು ಒಳ್ಳೆ ರಾಜರ ಕಾಲದಲ್ಲಿ ಮಹಾರಾಣಿಯನ್ನ ತೊಟ್ಟಿಲಲ್ಲಿ ಕುರಿಸಿಕೊಂಡು ಹೋಗುತರಲ್ಲ ಆ ತರ ಎತ್ಕೊಂಡು ಆ ದಿಬ್ಬ ಏರಿ  ಆಲದ ಮರದ ಬಳಿ ತಂದು ಇಡೋ ಹೊತ್ತಿಗೆ ಸುಸ್ತಾಗಿದ್ವಿ. ಶಂಕ್ರಪ್ಪ ಸರಿಯಾಗಿ ಬೈದುಕೊಂಡು, ಬೇರೆ ತರನೇ ಹೈಡ್ ಮಾಡ್ಬೇಕು ಎಂದು ಪ್ಲಾನ್ ಮಾಡ್ತಿದ್ದ. ಚಿಟ್ಟುಕುಟುರಗಳು ಮರದ ಮೇಲೆ ಎಲೆಗಳ ನಡುವೆ ಕುಳಿತು “ ಟೊಕ್. . .ಟೊಕ್. . .ಟೊಕ್. . .”ಎಂದು ಕೂಗುತ್ತಾ ಕುಳಿತ್ತಿದ್ದವು.




ಹೈಡ್ ಸುಮಾರು ಒಂದು ವಾರ ಅಲ್ಲೆ ಹಾಗೆಯೆ ಬಿಟ್ಟು ಹಕ್ಕಿ ಬೆದರು ಬೀಳದಂತೆ ರೂಡಿ ಮಾಡಿ, ಮುರಳಿ ತನ್ನ ಹ್ಯಾಂಡಿ ಕ್ಯಾಮರದ ಜೊತೆ ಹೈಡ್ ಒಳಗಡೆ ದಿನ ಪೂರ್ತಿ ಕುಳಿತು ಒಂದೆರಡು ಸುಂದರ ಫೋಟೋ ತೆಗೆದು ಖುಷಿ ಪಟ್ಟರು. ಹಕ್ಕಿಯು ಕೂಡ ಬಹಳ ಸುಂದರವಾದ್ದದೆ ಬಿಡಿ!. ನೋಡಲು ಗುಬ್ಬಚ್ಚಿ ಗಾತ್ರದ ಪಾಚಿ ಹಸಿರು ಬಣ್ಣದ ಹಕ್ಕಿ, ಹೊಟ್ಟೆಯ ಭಾಗದಲ್ಲಿ ತಿಳಿ ಹಸಿರು, ತಲೆ ಕಪ್ಪು; ಕಣ್ಣಿನ ಸುತ್ತ ಹಳದಿಯುಂಗರವಿದ್ದು, ಹಣೆ ಮತ್ತು ಎದೆಯ ಭಾಗಗಳಲ್ಲಿ ಕೆಂಪು; ಗದ್ದ ಮತ್ತು ಕತ್ತು ಹಳದಿ; ಬೆನ್ನು, ರೆಕ್ಕೆ, ಬಾಲ ಪಾಚಿಹಸಿರು, ಚಿಕ್ಕ ಬಲಿಷ್ಠವಾದ ಕೊಕ್ಕು, ಕಾಲುಗಳು ಕೆಂಪು ಬಣ್ಣದ್ದು, ಕೊಕ್ಕಿನ ತಳದಲ್ಲಿ ಮೀಸೆಗಳಿರುತ್ತವೆ. ಈ ಮೀಸೆಗಳು ಪರಾಗ ಸ್ಪರ್ಶಕ್ರಿಯೆಯಲ್ಲಿ ಸಹಾಯಕವಾಗುತ್ತವೆ. ಕುಟುರಗಳು ಆಲ, ಅರಳಿ, ಅತ್ತಿ ಮುಂತಾದ ಹಣ್ಣುಗಳಿರುವ ಮರಗಳಲ್ಲಿ ಆಹಾರವನ್ನು ಅನ್ವೇಷಿಸುತ್ತಿರುತ್ತವೆ.

ನಮ್ಮ ಬನ್ನೇರುಘಟ್ಟದಂತಹ ಕುರುಚಲು ಎಲೆ ಉದುರುವ ಕಾಡು ಒಂದು ದೊಡ್ಡ ಬೆಳೆಯುತ್ತಿರುವ ನಗರದ ಪಕ್ಕದಲ್ಲಿದೆ ಎಂದರೆ ಕಾಡು ನಶಿಸುತ್ತಿರುವ ಬಗ್ಗೆ ಉಹಿಸಬಹುದು. ಕಾಡಿನ ಸುತ್ತಲೂ ಒತ್ತುವರಿ, ಕಳ್ಳಬೇಟೆ, ಆವಾಸಗಳ ನಾಶ, ಮಾಲಿನ್ಯ ಒಂದಲ್ಲ ಎರಡಲ್ಲ ನೂರಾರು ಸಮಸ್ಯೆಗಳು ಬಿಡಿ!, ಅಂತಹದರಲ್ಲಿ ಕಾಡಿನ ನಡುವೆ ಕುಟುರಗಳ ಸದ್ದು ಕೇಳಿಸುತ್ತದೆ ಎಂದರೆ ಕಾಡಿನ ಆರೋಗ್ಯದಲ್ಲಿ ಚೈತನ್ಯ ಮೂಡುತ್ತಿದೆ ಎಂದರ್ಥ, ಇಂತಹ ಸುಂದರ ಪ್ರಾಣಿ-ಪಕ್ಷಿಗಳನ್ನು ಉಳಿಸಿಕೊಳ್ಳಬೇಕಾದರೆ ಕಾಡುಗಳ ಸಂರಕ್ಷಣೆ ಅತ್ಯಗತ್ಯ!.






- ಅಶ್ವಥ ಕೆ.ಎನ್

# ವಿದ್ಯಾರ್ಥಿಗಾಗಿ ವಿಜ್ಞಾನ

## * ಜೀವಂತ ಕಂಪ್ಯೂಟರ್ ಗೆ ಒಂದು ಜೈವಿಕ ಸ್ವಿಚ್ಚು



ಕಬ್ಬಿಣ, ಪ್ಲಾಸ್ಟೀಕ್ , ಸಿಲಿಕಾನ್ ಇವೇ ಮೊದಲಾದ ನಿರ್ಜೀವ ವಸ್ತುಗಳಿಂದ ಮಾಡಲ್ಪಟ್ಟ ಮೊಬೈಲು, ಕಂಪ್ಯೂಟರ್ ಇತರೆ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಟ್ರಾನ್ಸಿಸ್ಟರ್ರೇ ಜೀವಾಳ. ಟ್ರಾನ್ಸಿಸ್ಟರ್ ಬಳಸದ ಎಲೆಕ್ಟ್ರಾನಿಕ್ ವಸ್ತು ಇಲ್ಲವೇ ಇಲ್ಲ! . ಸಿಲಿಕಾನ್ ನಿಂದ ತಯಾರಾದ ಟ್ರಾನ್ಸಿಸ್ಟರ್ ಒಂದು ಸ್ವಿಚ್ಚಿನಂತೆ ಕೆಲಸ ಮಾಡುತ್ತದೆ. ಇದನ್ನು ಆಪ್ ಆನ್ ಮಾಡಬಹುದು. ಒಂದು ಕಂಪ್ಯೂಟರ್ ನಲ್ಲಿ ಸುಮಾರು ಮಿಲಿಯನ್ ನಿಂದ ಬಿಲಿಯನ್ ನಷ್ಟು ಸಣ್ಣ ಸಣ್ಣ ಈ ಸ್ವಿಚ್ಚುಗಳು ಕೆಲಸ ಮಾಡುತ್ತವೆ. ಈ ಎಲ್ಲಾ ಕೀಲಿಗಳು ಜೊತೆಯಾಗಿ ಕೆಲಸ ಮಾಡುವುದರಿಂದಲೇ ಕಂಪ್ಯೂಟರ್ ನಲ್ಲಿ ನಾವು ಇಂಟರ್ನೆಟ್ಟು, ಫೇಸ್ಬುಕ್ಕು ನೋಡಬಹುದು.

ಇತ್ತೀಚೆಗೆ ಟಯೋಥೀ ಲೂ ಎಂಬ ವಿಜ್ಞಾನಿಯು ನಮ್ಮ ಜೀವಕೋಶದಲ್ಲಿ ಇರುವ DNA ಯನ್ನು ಬಳಸಿ ಅತಿ ಸೂಕ್ಷ್ಮ ಜೈವಿಕ ಟ್ರಾನ್ಸಿಸ್ಟರ್ ನ್ನು ರೂಪಿಸಿದ್ದಾರೆ. ಇದಕ್ಕೆ ಬಯೋ ಸ್ವಿಚ್ ಎಂದು ಕರೆದಿದ್ದಾರೆ. ಜೀವಕೋಶಗಳೇ ಬರಿಗಣ್ಣಿಗೆ ಕಾಣುವುದಿಲ್ಲ ಇನ್ನೂ DNA ಗಾತ್ರದ ಬಯೋ ಸ್ವಿಚ್ಚು ಬಹಳ ಚಿಕ್ಕದು. ಈ ಬಯೋ ಸ್ವೀಚ್ ನ್ನು ಸಾಮಾನ್ಯ ಕಂಪ್ಯೂಟರ್ ಗಳಲ್ಲಿ ಬಳಸಲು ಸದ್ಯಕ್ಕೆ ಸಾಧ್ಯವಿಲ್ಲದಿದ್ದರೂ ಇದನ್ನು ನಮ್ಮ ದೇಹದಲ್ಲಿ ಇರಬಹುದಾದ ಕ್ಯಾನ್ಸರ್ ಜೀವಕೋಶಗಳಲ್ಲಿ ಕಂಡುಹಿಡಿಯಲು ಇದನ್ನು ಬಳಸಬಹುದು ಎನ್ನುತ್ತಾರೆ ವಿಜ್ಞಾನಿಗಳು.

- ಶಂಕರಪ್ಪ.ಕೆ.ಪಿ



# ಬರ



ಎಲ್ಲಿಂದ ತರುತಿ ನೀರಾ. . !
ಜಲ ಭತ್ತಿ  ಬರದಾಯ್ತು
ತುಂಬಿ ತುಳುಕೊ ಕೆರೆಯು ಅಂಗಳವಾಯ್ತು
ಮಳೆ ಕಾಣ  ಬರ  ಕ್ಷಾಮವಿಹುದು.

ನದಿದಂಡೆ  ಬಣಗುಡುತಿದೆ
ಹಸುನೀಗಿ ಪ್ರಾಣ ಪಕ್ಷಿಯಾರಿದೆ  ಜಲಚರಕೆ
ಮೀನೆಲುಬು ಹೊತ್ತು ಸಾಗಿದೆ ಇರುವೆ ಸಾಲು
ದೂರದಲ್ಲೊಂದು ಹೆಮ್ಮರ ವಿಶ್ರಾಂತಿಯ ನಿತ್ಯಧಾಮ.

ಮನುಜನ ಅತಿರೇಖಾವರಣಾ
ಪ್ರಕೃತಿಯ ವಿಶ್ವರೂಪದರ್ಶನಾ
ಅರಿತೆಂದು ನಿನಗೆ  ಪರಿಪಾಠವಾಗಿದೆ
ಪ್ರಕೃತಿಯ ಕಗ್ಗೊಲೆ  ಅಂತರ್ ಜಲವೂ ಸ್ವಾಹಃ.

ಜಲಶೋಧ  ಜಲಕ್ಷಾಮ
ಜೀವಜಲ ಅತ್ಯಮೂಲ್ಯ
ಜಲವೇ ಆಧಾರ ಜೀವ ಸಂಕುಲ
ಕೃಪೆತೋರೋ ವರುಣಾ. . . . .!.

- ಕೃಷ್ಣ ನಾಯಕ್